55. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 2001-02ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

ಕರ್ನಾಟಕ ವಿದ್ಯುಚ್ಛಕ್ತಿ, ಸುಧಾರಣಾ ಅಧಿನಿಯಮ 1999ರ ಭಾಗ-1, 4ನೇ ಉಪ ಕಂಡಿಕೆಯ ಮೇರೆಗೆ:

56. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ 2001-02ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಶ್ರೀ ವಸಂತ ಎ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

57. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2001-02ನೇ ಸಾಲಿನ 32ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ವಿಧಾನ ಸಭಾ ಕ್ಷೇತ್ರಗಳ ಮರು ವಿಂಗಡನೆ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ (ಕನಕಪುರ), ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ತಮಗೆ ಒಂದು ಪತ್ರ ಬರೆದು ತಮ್ಮ ಅಪ್ಪಣೆ ಪಡೆದಿದ್ದೇನೆ. ಇವೊತ್ತು ಇಡೀ ಸದನಕ್ಕೆ ಸಂಬಂಧಪಟ್ಟಿರತಕ್ಕ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಕಳೆದ ಎರಡು ತಿಂಗಳುಗಳಿಂದ ನಮ್ಮ ಬಹುತೇಕ ಶಾಸಕರು ಒಂದು ರೀತಿಯ ಆತಂಕಕ್ಕೆ ಒಳಗಾಗಿರತಕ್ಕ ವಿಚಾರ ತಮ್ಮ ಗಮನಕ್ಕೆ ಈಗಾಗಲೇ ಬಂದಿದೆ. ಈ ಕ್ಷೇತ್ರಗಳ ಮರುವಿಂಗಡಣೆ ವಿಚಾರದಲ್ಲಿ ಚರ್ಚೆ, ವಿಮರ್ಶೆ, ವಿಶ್ಲೇಷಣೆ ಇವೆಲ್ಲವೂ ನಡೆಯುತ್ತಿದೆ. ಜೊತೆಗೆ ಬಹಳ ಊಹಾಪೋಹಗಳಾಗಿವೆ. ನನಗೆ ಗೊತ್ತಿರುವಂತೆ ಎಲ್ಲವೂ ಊಹಾಪೋಹಗಳೇ, ಇದರಿಂದ ಸಾರ್ವಜನಿಕರಲ್ಲಿ ಒಂದು ರೀತಿಯ ಗೊಂದಲವೇರ್ಪಟ್ಟಿದೆ. ಏನಾಗಿದೆಯೆಂದರೆ, 'ನನ್ನ ಕ್ಷೇತ್ರ ಇನ್ನು ಮುಂದೆ ಮೀಸಲಾತಿಗೆ ಹೋಗಬಹುದು' ಅಥವಾ 'ನನ್ನ ಕ್ಷೇತ್ರ ಒಡೆದುಹೋಗಬಹುದು, ಮೀಸಲಾತಿ ಇಲ್ಲದೆ ಆಗಬಹುದು, ನಮ್ಮ ಕ್ಷೇತ್ರ ಸಂಪೂರ್ಣವಾಗಿ ವಿಸರ್ಜನೆಯಾಗಬಹುದು' ಎನ್ನುವ ಆತಂಕ ವಿಧಾನಸಭಾ ಚುನಾವಣೆ ಇನ್ನು ಎರಡು ವರ್ಷ ಇರುವಂಥ ಸಂದರ್ಭದಲ್ಲಿ ಇದು ಆಗಿದೆ. ಮತ್ತೆ ಕೆಲವರಿಗೆ ಏನಾಗಿದೆಯೆಂದರೆ, ಆ ಜಾಗ ನಮಗೆ ಮತ್ತೆ ಬರುವುದಿಲ್ಲವೆಂದು ಕೆಲವು ಶಾಸಕರುಗಳು ಆ ಕ್ಷೇತ್ರದ ಬೆಳವಣಿಗೆಗಳ ಬಗ್ಗೆ, ಅಭಿವೃದ್ಧಿ ಕೆಲಸ-ಕಾರ್ಯಗಳ ಬಗ್ಗೆ ಸ್ವಲ್ಪ ನಿರಾಸಕ್ತಿ ತೋರಿಸುತ್ತಿರುವುದನ್ನೂ ಸಹ ನಾನು ಗಮನಿಸಿದ್ದೇನೆ. ಆದರೆ, ಕೆಲವು ಕಡೆಗಳಲ್ಲಿ ಆಸಕ್ತಿ ಹೆಚ್ಚಾಗಿದೆ. ಅಂದರೆ ಅದು ಸೇರಬಹುದೆಂದು, ಇದನ್ನೂ ಸೇರಿಸಿಕೊಳ್ಳಬೇಕೆಂಬ ಪ್ರಯತ್ನವೂ ಸಹ ನಡೆಯುತ್ತಿದೆ. ಇದು ಜಾತಿ ಆಧಾರದ ಮೇಲೆ ಅಥವಾ ಗುಂಪಿನ ಆಧಾರದ ಮೇಲೆ ಮತ್ತು ರಾಜಕೀಯ ದ್ವೇಷ, ಅಸೂಯೆ, ಸೇಡನ್ನು ತೀರಿಸಿಕೊಳ್ಳುವುದಕ್ಕೆ ಇದೊಂದು ಅವಕಾಶವಾಗಬಹುದೇನೋ ಎನ್ನುವ ಅನುಮಾನ ಅನೇಕರಲ್ಲಿದೆ. ಒಟ್ಟಾರೆ ಬಹುತೇಕ ಸದಸ್ಯರು ಇದೊಂದು ವಿಚಾರದಲ್ಲಿ ಆತಂಕ ಮತ್ತು ಗೊಂದಲದಲ್ಲಿದ್ದಾರೆ. ಅವರ ಮನಸ್ಸಿನೊಳಗೆ ಗೊಂದಲವಿದೆ. ಇದರ ಜೊತೆಗೆ ಪತ್ರಿಕೆಗಳಲ್ಲಾ ಬರುತ್ತಿದೆ. ಪತ್ರಿಕೆಯವರು

ಯಾವ ಆಧಾರದ ಮೇಲೆ ಬರೆಯುತ್ತಿದ್ದಾರೋ ನನಗೆ ಗೊತ್ತಿಲ್ಲ, ಮತ್ತು ನೀವು ಆ ಸಮಿತಿಯ ಅಧ್ಯಕ್ಷರೆಂದು ಕೆಲವು ಕಡೆ ವರದಿಯಾಗಿರುವುದನ್ನೂ ನಾನು ನೋಡಿದ್ದೇನೆ. ತಾವು ಆ ಸಮಿತಿಗೆ ಅಧ್ಯಕ್ಷರಲ್ಲ, ತಾವು ಸದಸ್ಯರು ಅಷ್ಟೆ. ತಮ್ಮ ಕಡೆಯಿಂದ ಮಾನ್ಯ ಮಲ್ಲಿಕಾರ್ಜುನ ಖರ್ಗೆ, ಶಿವಕುಮಾರ್, ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು, ತಾವು ಮತ್ತು ನಾವು ವಿಧಾನಸಭೆಯಿಂದ ಐದು ಜನರಿದ್ದೇವೆ, ಲೋಕಸಭೆಯ ಐದು ಜನ ಸದಸ್ಯರಿದ್ದಾರೆ. ಒಟ್ಟು ಹತ್ತು ಜನ ಸದಸ್ಯರಿದ್ದಾರೆ. ಇಲ್ಲಿರತಕ್ಕಂಥ 224 ಕ್ಷೇತ್ರಗಳ ಪ್ರತಿನಿಧಿಗಳು ಯಾರಿದ್ದಾರೆ, ಅವರ ಹಿತರಕ್ಷಣೆ ಮಾಡುವುದರ ಜೊತೆಗೆ ರಾಜ್ಯದಲ್ಲಿ ಸಾಮಾಜಿಕ ನ್ಯಾಯವನ್ನು ಕಾಪಾಡಿಕೊಂಡು ಹೋಗುವ ದೃಷ್ಟಿಯಿಂದ ಏನು ಮಾಡಬೇಕೆನ್ನುವುದರ ಜೊತೆಗೆ ಲೋಕಸಭೆ ಇವೊತ್ತು ಏನು ಕಾನೂನು ಮಾಡಿ ಮರುವಿಂಗಡಣೆ ಕೆಲಸ ತೆಗೆದುಕೊಂಡಿದೆ. ಈ ಕುರಿತಂತೆ ಶ್ರೀ ಕುಲದೀಪಸಿಂಗ್ ಅವರಿಗೆ ಅಧಿಕಾರ ಕೊಟ್ಟಿದೆ. ಅದಾದ ನಂತರ ತಾವು ಈ ಕುರಿತಂತೆ ಒಂದು ಆಸಕ್ತಿ ತೋರಿಸಿದ್ದೀರಿ. ಅನೇಕ ಶಾಸಕರಂತೂ ಬಹಳ ಆತಂಕಕ್ಕೆ ಒಳಗಾಗಿದದ್ದಾರೆ. ಕೆಲವು ಶಾಸಕರಂತೂ ನಮ್ಮ ಕ್ಷೇತ್ರ ಇನ್ನು ಹೊರಟು ಹೋಯಿತು. ನಾವು ಮತ್ತೊಮ್ಮೆ ವಿಧಾನಸಭೆಗೆ ಬರುವುದಕ್ಕೆ ಬೇರೆ ಜಾಗ ಹುಡುಕಬೇಕು ಅಥವಾ ನಮಗೆ ರಾಜಕೀಯ ಸಾಕು ಎಂದು ಹೇಳುತ್ತಿರುವುದನ್ನು ನೋಡುತ್ತಿದ್ದೇನೆ. ಇವೊತ್ತು ಅಲ್ಲೊಂದು ಇಲ್ಲೊಂದು ಕಡೆಗಳಲ್ಲಿ ವರದಿಯಾಗಿರುವಂತೆ 40-45 ಮೀಸಲಾತಿ ಕ್ಷೇತ್ರಗಳಾಗಿವೆಯೆಂದು ಬರುತ್ತಿದೆ. ನನಗೆ ಗೊತ್ತಿರುವಂತೆ ಇವೆಲ್ಲವೂ ಊಹಾಪೋಹಗಳೇ. ನಾನೊಬ್ಬ ಸಮಿತಿಯ ಸಹ ಸದಸ್ಯನಾಗಿ ನನ್ನ ತಿಳಿವಳಿಕೆಯಂತೆ ಇವೆಲ್ಲವೂ ಊಹಾಪೋಹಗಳೇ. ನನಗೆ ಗೊತ್ತಿರುವಂತೆ ಇಲ್ಲಿರತಕ್ಕಂಥ ಇತರ 3-4 ಸದಸ್ಯರಿಗೂ ಸಹ ಇದರ ಮಾಹಿತಿ ಇಲ್ಲ. ತಾವು ಸಭಾಧ್ಯಕ್ಷರಾಗಿ ನಮ್ಮ ಶಾಸಕರ ಪ್ರತಿನಿಧಿಗಳ ಹಿತವನ್ನು ಕಾಪಾಡುವ ದೃಷ್ಟಿಯಿಂದ ಕೆಲವು ಅಂಕಿ-ಅಂಶಗಳನ್ನು ಸಂಗ್ರಹ ಮಾಡಿ ಗೈಡ್‌ಲೈನ್ಸ್ ಏನಿದೆ, ಅದರ ಪ್ರಕಾರ ಮಾಡಬೇಕೆನ್ನುವುದಕ್ಕೆ ತಾವು ಆಯೋಗದ ಅಧ್ಯಕ್ಷರೊಂದಿಗೆ ಹಲವಾರು ಸಲ ಮಾತನಾಡಿ ಆಸಕ್ತಿ ತೋರಿಸಿದ್ದೀರಿ. ನಮ್ಮ ಹಿತವನ್ನು ಕಾಪಾಡುವ ದೃಷ್ಟಿಯಿಂದ, ಸಾಮಾಜಿಕ ನ್ಯಾಯದ ಸರಿಯಾದ ದೃಷ್ಟಿಕೋನದಿಂದ, ಮರುವಿಂಗಡಣೆಯಾಗುವ ದೃಷ್ಟಿಯಿಂದ ತಾವು ತೋರಿಸುತ್ತಿರುವ ಆಸಕ್ತಿಯನ್ನು ನಾನು ಮೆಚ್ಚುತ್ತೇನೆ. ಅದಕ್ಕೋಸ್ಕರವೇ ನಾನು ಸದಭಿಪ್ರಾಯ ಇಟ್ಟುಕೊಂಡಿರತಕ್ಕವನು. ತಾವು ಹೇಳಿದ ತಕ್ಷಣ ನಾನು ತಮ್ಮ ಜೊತೆ ದೆಹಲಿಗೆ ಬಂದಿರತಕ್ಕಂಥಾದ್ದು ಆದುದರಿಂದ, ಈ ಗೊಂದಲ ಮುಗಿಯಬೇಕು. ಬಹಳ ದಿವಸಗಳ ಕಾಲ ಈ ಗೊಂದಲ ಇದ್ದರೆ, ಈಗ ಬಜೆಟ್ ಅಧಿವೇಶನ ನಡೆಯುತ್ತಿದೆ, ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಜರುಗುತ್ತಿದೆ. ಮೊದಲನೇ ಹಂತವಾಗಿ ಮಂತ್ರಿಗಳು ಬೆಳಿಗ್ಗೆ ಹೊತ್ತು ಆಕಸ್ಮಿಕವಾಗಿ ಬರುತ್ತಾರಷ್ಟೆ. ಮಧ್ಯಾಹ್ನದ ಹೊತ್ತು ಅವರೇನೂ ಬರುವುದಿಲ್ಲ. ನಿನ್ನೆ ಅದರ ಬಗ್ಗೆ ಸಾಕಷ್ಟು ಸವಿಸ್ತಾರವಾಗಿ ಪ್ರಸ್ತಾಪವಾಗಿದೆ. ಮಾನ್ಯ ಗೌರವಾನ್ವಿತ ಹಿರಿಯ ಮಂತ್ರಿಗಳು ಮತ್ತು ಇತ್ತೀಚೆಗೆ ಕೆಲವರು ದಿಢೀರ್ ಆಗಿ ಹಿರಿಯರಂತೆ ವರ್ತಿಸುತ್ತಿರುವ ಕಿರಿಯ ಮಂತ್ರಿಗಳು ಎಷ್ಟು ಗೈರುಹಾಜರಾಗಿದ್ದಾರೆಂಬ ಬಗ್ಗೆ ಮಾತನಾಡಿದ್ದೇವೆ. ಶಾಸಕರಿಗೂ ಸಹ ಆಸಕ್ತಿ ಕಡಿಮೆಯಾಗುತ್ತಿದೆ. ಇದು ರಿಸರ್ವ್ ಕ್ಷೇತ್ರ ಆಗುತ್ತದೋ, ಇದು ರಿಸರ್ವ್ ಆಗಿ ಹೊರಟುಹೋಗುತ್ತದೇನೋ, ನಾನು ಬೇರೆ ಕಡೆ ಹೋಗಬೇಕೆನ್ನುವ ಪ್ರಯತ್ನವೆಲ್ಲವೂ ನಡೆಯುತ್ತಿದೆ. ತಮಗೆ ಗೊತ್ತಿರುವ ಮಾಹಿತಿಯಂತೆ ತಾವು ಮಾತನಾಡಿದ್ದೀರಿ. ಇದರ ಬಗ್ಗೆ ಆಸಕ್ತಿ ತೋರಿಸಿ ನಮ್ಮೆಲ್ಲರ ಹಿತ ಕಾಪಾಡುತ್ತೀರೆಂಬ ಬಗ್ಗೆ ಭರವಸೆ ಇದೆ. ಈ ಬಗ್ಗೆ ಎಲ್ಲರಿಗೂ

ಇರುವ ಆತಂಕಕ್ಕೆ ಕೊನೆ ಹಾಡಬೇಕು. ಈ ಸದನಕ್ಕೆ ತಾವು ತಿಳಿಸಬೇಕು. ನಮ್ಮ ಪಕ್ಷದ ವತಿಯಿಂದ ನಾನು ಅಲ್ಲಿರಬೇಕಾದರೆ ಪಕ್ಷದ ಸದಸ್ಯರುಗಳ ಸಂಖ್ಯೆಯ ಆಧಾರದ ಮೇಲೆ ತಾವು ಮಾಡಿರತಕ್ಕಂಥಾದ್ದು. ಅದನ್ನು ಮಾಡಲೇಬೇಕೆಂದೇನೂ ಇರಲಿಲ್ಲ. ಸ್ವತಂತ್ರ ಅಭ್ಯರ್ಥಿಗಳು ಸುಮಾರು 22 ಜನರು ನಮಗಿಂಥಲೂ ಜಾಸ್ತಿ ಇದ್ದರು. ಆದರೂ ಸಹ ಜನತಾ ಪರಿವಾರಕ್ಕೆ ಒಂದು ಅವಕಾಶ ಕಲ್ಪಿಸಿಕೊಡಲಾಗಿದೆ. ನಾವು ಈ ರಾಜ್ಯವನ್ನು ಆಳಿದವರು, ಮುಂದೆಯೂ ಆಳಬಹುದೆನ್ನುವ ಭಾವನೆಯಿಂದ ಒಂದು ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ, ನಾನು ನಿಮಗೆ ಭರವಸೆ ಕೊಡುತ್ತೇನೆ. ಪಕ್ಷದ ಹಿತಾಸಕ್ತಿಗಿಂತ ರಾಜ್ಯದ ಹಿತಾಸಕ್ತಿ ಮತ್ತು ಹಾಲಿ ಶಾಸಕರುಗಳೇನಿದ್ದಾರೆ. ಅವರ ಹಿತಾಸಕ್ತಿಯನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಯಾರಿಗೂ ಅನ್ಯಾಯವಾಗದಂತೆ ತಮ್ಮ ಮಾರ್ಗದರ್ಶನದಲ್ಲಿ ನಾವೆಲ್ಲರೂ ಸಹಕಾರ ಕೊಡುತ್ತೇವೆ. ಅದರ ಬಗ್ಗೆ ಮಾಹಿತಿಯನ್ನು ತಾವು ಸದನಕ್ಕೆ ತಿಳಿಸಬೇಕು. ಇಲ್ಲದಿದ್ದರೆ ಏನಾಗುತ್ತದೆಂದರೆ, ಆಗಲೇ ಡೆಲಿಗೇಷನ್ ಬರಲು ಶುರುವಾಗಿದೆ, ಆ ಹೋಬಳಿ ಇಲ್ಲಿ ಸೇರಿಕೊಂಡಿದೆಯಂತೆ, ಈ ಹೋಬಳಿ ಅಲ್ಲಿ ಸೇರಿಕೊಂಡಿದೆಯಂತೆ, ಆ ತಾಲ್ಲೂಕನ್ನು ರಿಸರ್ವ್ ಮಾಡಲು ಹೊರಟಿದ್ದೀರಿ, ನೀವು ಕಾನ್ ಸ್ಟಿಟ್ಯೂಷನ್ಸ್ ಅನ್ನು ವಿಸರ್ಜನೆ ಮಾಡಿಬಿಟ್ಟರೆಂದು ಹೇಳಿ ಪಕ್ಷಗಳಲ್ಲಿ ಗೊಂದಲವುಂಟಾಗಿದೆ. ಈಗ ಹುಮ್ನಾಬಾದ್ ಚುನಾವಣೆ ಗೆಲ್ಲದ ಹೋಗಿದ್ದರೆ ಆಡಳಿತ ಪಕ್ಷದಲ್ಲಿ ಈಗಾಗಲೇ ಭಿನ್ನಮತಕ್ಕೆ ಇದೊಂದು ತುಪ್ಪ ಸುರಿದಂತಾಗುತ್ತಿತ್ತು. ಆಕಸ್ಮಿಕವಾಗಿ ಗೆದ್ದಿರುವುದರಿಂದ ಸ್ವಲ್ಪ ಅದು ಹಾಗೆಯೇ ಹುದುಗಿಕೊಂಡು ಬೂದಿ ಮುಚ್ಚಿದ ಕೆಂಡದಂತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮೈಸೂರು ಎಲೆಕ್ಷನ್ ಗೆದ್ದರೂ ಅದು ಆಕಸ್ಮಿಕ. ಹುಮ್ನಾಬಾದ್ ಎಲೆಕ್ಷನ್ ಗೆದ್ದರೂ ಆಕಸ್ಮಿಕ. ಕಾರ್ಪೊರೇಷನ್ ಎಲೆಕ್ಷನ್ ಗೆದ್ದರು ಅದೂ ಆಕಸ್ಮಿಕ. ಪ್ರತಿ ವರ್ಷವೂ ನಮ್ಮ ಪರೀಕ್ಷೆ ನಡೆದಿದೆ. ನಾವು ಆರಿಸಿ ಬಂದು ಈಗಾಗಲೇ ಮೂರೂವರೆ ವರ್ಷಗಳಾದವು. ಈ ಮೂರುವರೆ ವರ್ಷಗಳಲ್ಲಿ ಮೊದಲನೇ ವರ್ಷ ಗ್ರಾಮ ಪಂಚಾಯಿತಿ ಚುನಾವಣೆ, ಎರಡನೆಯ ವರ್ಷದಲ್ಲಿ ಜಿಲ್ಲಾ ಪಂಚಾಯಿತಿ ಚುನಾವಣೆ, ಮೂರನೇ ವರ್ಷದಲ್ಲಿ ಕಾರ್ಪೊರೇಷನ್, ಮುನಿಸಿಪಾಲಿಟಿ ಎಲೆಕ್ಷನ್ ಇನ್ನು ನಾಲ್ಕನೇ ವರ್ಷದಲ್ಲಿ ಬೈ-ಎಲೆಕ್ಷನ್, ಕನಕಪುರ ಎಲೆಕ್ಷನ್ ಬಿಟ್ಟರೆ ಬಾಕಿ ಎಲ್ಲವೂ ಕೂಡ ಏರಿಕೊಂಡು ಹೋಗಿದೆಯೇ ವಿನಾ ಇಳಿದುಕೊಂಡು ಬಂದಿಲ್ಲ. ಆದರೆ, ನಿಮ್ಮ ಕಾಲದಲ್ಲಿ ಹಾಗಾಗಿಲ್ಲ. ನಿಮ್ಮ ಕಾಲದಲ್ಲಿ ಕೊನೆಗೆ ಬರಬರುತ್ತಾ ಬ್ಯಾಟಿಂಗ್ ಬಿದ್ದುಹೋಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವೇ ಬ್ಯಾಟಿಂಗ್ ನಿಲ್ಲಿಸಿದೆವು. ಬ್ಯಾಟಿಂಗ್ ಮಾಡಲು ಹೋಗಲಿಲ್ಲ. ಚುನಾವಣೆಯಲ್ಲಿ ಎರಡೂ ಕಡೆಯವರು ಒಂದಾಗಿದ್ದರೆ ಇವರೆಲ್ಲಿ ಬರುತ್ತಿದ್ದರು? ಅದು ಒತ್ತಟ್ಟಿಗಿರಲಿ. ನಾನು ವಾಸ್ತವಾಂಶ ಹೇಳುತ್ತಿದ್ದೇನೆ. ನನಗೆ ಅಂತಹ ದೊಡ್ಡ ಸಮಸ್ಯೆಯಾಗುವುದಿಲ್ಲ, ಅವರಿಗೇ ಸಮಸ್ಯೆಯಾಗುವುದು. ಇವರು 136-140 ಜನರನ್ನು ಗೆಲ್ಲಿಸಿದ್ದು, ಜೊತೆಗೆ 20-30 ಜನರನ್ನು ಸೇರಿಸಿಕೊಂಡಿದ್ದಾರೆ. ಪಾಪ. ಅವರೆಲ್ಲರೂ ಕೂಡ 'ನಾವು ಯಾಕಾದರೂ ಇವರ ಜೊತೆ ಸೇರಿದೆವು?' ಎಂದು ಪರಿತಪಿಸುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಪ್ರಾಮಾಣಿಕ ಪ್ರಯತ್ನ ರಾಜ್ಯ ಮತ್ತು ರಾಷ್ಟ್ರದಲ್ಲಿ ಆಗಬೇಕಾಗಿದೆ. ಆ ದೃಷ್ಟಿಯಿಂದ ಲೋಕಸಭೆ ಮಾಡಿರುವ ಕಾನೂನು ಏನಿದೆ, ಆ ಕಾನೂನನ್ನು ಯಾರೂ ಸಹ ಇವ್ಹೊತ್ತು ತಡೆಹಿಡಿಯುವುದಕ್ಕಾಗುವುದಿಲ್ಲ, ಆದಷ್ಟು ಬೇಗ ಈ ಗೊಂದಲಕ್ಕೆ, ಈಗ ಇಡೀ ರಾಜ್ಯದಲ್ಲಿ ಈ ವರದಿಗಳು ಬರಬೇಜಾದರೆ ಅದಕ್ಕೆ

ಏನಾದರೂ ಕಾರಣ ಇರುತ್ತದೆ. ಹೀಗಾಗಿದೆಯೆಂದು ನಮ್ಮವರು ಯಾರೋ ಹೇಳಿರುತ್ತಾರೆ. ನಮಗೂ ಸಹ ಸಮಸ್ಯೆಗಳಾಗುತ್ತಿದೆ. ಆದುದರಿಂದ, ತಾವು ಈ ಗೊಂದಲವನ್ನು ನಿವಾರಿಸುವುದಕ್ಕೆ ತಾವು ಆ ಸಮಿತಿಯ ಅಧ್ಯಕ್ಷರು ಅಲ್ಲದೆ ಹೋದರೂ ಸಹಸದಸ್ಯರಾಗಿರುವುದರಿಂದ, ಆ ಕುರಿತು ತಾವು ಹೆಚ್ಚಿನ ಆಸಕ್ತಿ ತೋರಿಸಿರುವುದರಿಂದ ಈ ಸದನಕ್ಕೆ ದಯವಿಟ್ಟು ತಿಳಿಸಬೇಕೆಂದು ತಮ್ಮಲ್ಲಿ ಕೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯಾರವರು ಯಾವ ವಿಷಯ ಪ್ರಸ್ತಾಪಿಸಿದರೋ ಅದರ ಬಗ್ಗೆ ಇವೊತ್ತು ಆ ರೀತಿಯಾದ ಎಲ್ಲಾ ಗೊಂದಲವುಂಟಾಗುತ್ತಿದೆ. ಕೇವಲ ಶಾಸಕ ಮಿತ್ರರಲ್ಲಿ ಅಷ್ಟೇ ಅಲ್ಲ. ಇಡೀ ಸಾರ್ವಜನಿಕ ರಂಗದಲ್ಲಿ ಇದರ ಬಗ್ಗೆ ಗೊಂದಲ ನಿರ್ಮಾಣವಾಗಿದೆ. ನಾನು ಆ ಸಮಿತಿಯಲ್ಲಿ ಸಹಸದಸ್ಯನಾಗಿ ಇರುವುದರಿಂದ ಇವೊತ್ತು ಎಷ್ಟೋ ಜನ ಶಾಸಕರು ಮತ್ತು ಸಾರ್ವಜನಿಕರು ಬಂದು ಇದು ರಿಸರ್ವ್ ಆಗಿದೆಯೇ? ಡಿಸ್ಟ್ರಿಕ್ಟ್‌ಗೆ ಸಂಬಂಧಿಸಿದಂತೆ ಎಲ್ಲಾ ಪಿಕ್ಚರ್ ಬಂದಿದೆಯೆಂತಲ್ಲಾ ಇದು ನಿಜವೇ ಎಂದು ನಮ್ಮನ್ನು ಕೇಳುತ್ತಿದ್ದಾರೆ, ಫೋನ್ ಮಾಡುತ್ತಿದ್ದಾರೆ. ಇದಕ್ಕೆ ನನಗೂ ಉತ್ತರಿಸುವುದಕ್ಕಾಗುತ್ತಿಲ್ಲ.

ನಿಜವಾಗಿ ಹೇಳಬೇಕೆಂದರೆ ಅದರ ಒಂದು ಸಭೆಯೂ ಆಗಿಲ್ಲ. ಹೀಗಾಗಿ ಹೊರಗೆಲ್ಲಾ ಕ್ಷೇತ್ರ ವಿಂಗಡಣೆಯಾಗಿದ್ದು, ವಿಧಾನಸಭಾ ಕ್ಷೇತ್ರ ಜನಸಂಖ್ಯಾವಾರು ವಿಂಗಡಣೆಯಾಗಿದ್ದು, ಅವರೇನು ಗೈಡ್‌ಲೈನ್ಸ್ ಕೊಟ್ಟಿದ್ದಾರೆ ಅದರ ಪ್ರಕಾರ ಡಿವಿಜನ್ ಮಾಡಿದ್ದು ಅವೆಲ್ಲಾ ವಿಚಾರಗಳು ಬರುತ್ತಿದೆ. ಇದರಿಂದ ಇಂದು ಇದರ ಬಗ್ಗೆ ಸಂಪೂರ್ಣವಾಗಿ ಗೊಂದಲ ನಿರ್ಮಾಣವಾಗಿದೆ. ಇದಕ್ಕೆ ಉತ್ತರವನ್ನು ಕೊಡತಕ್ಕ ಪರಿಸ್ಥಿತಿಯಲ್ಲಿ ನಾವು ಇಲ್ಲ. ಅದಕ್ಕಾಗಿ ದಯವಿಟ್ಟು ಇವತ್ತೇನು ಸಾರ್ವಜನಿಕರಲ್ಲಿ, ಜನಪ್ರತಿನಿಧಿಗಳಲ್ಲಿ ಗೊಂದಲವೇನು ನಿರ್ಮಾಣವಾಗಿದೆ ಅದಕ್ಕೆ ತಾವು ಸ್ಪಷ್ಟೀಕರಣ ನೀಡುವುದರ ಮೂಲಕ ಅಂತಿಮಗೊಳಿಸಬೇಕಾಗಿದೆ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಾನೂ ಕೂಡ ವಿನಂತಿ ಮಾಡಿಕೊಂಡಿದ್ದೇನೆ, ಇಡೀ ಮಲೆನಾಡಿನ ಭಾಗ ಎರಡು ಲಕ್ಷ ಜನಸಂಖ್ಯೆಗೆ ನಿಗದಿ ಮಾಡಿದರೆ ಸುಮಾರು ನೂರು ಕಿಲೋಮೀಟರ್ ಅಂತರ ಬರುತ್ತದೆ.

ಅಧ್ಯಕ್ಷರು : ಈ ವಿಚಾರವನ್ನು ನಾವು ಈಗಾಗಲೇ ಪ್ರತಿವಾದಿಸಿದ್ದೇವೆ. ನಾನೂ ಹಾಗೂ ಕೌನ್ಸಿಲ್ ಛೇರ್ಮನ್ ಹೋಗಿ ಹೇಳಿದ್ದೇವೆ. ಪರ್ಸನಲ್ ಆಗಿ ಮಾತನಾಡಿದ್ದೇವೆ.

ಶ್ರೀ ಅರಗಜ್ಞಾನೇಂದ್ರ : ಈಶಾನ್ಯ ರಾಜ್ಯಗಳಿಗೆ ಇರುವಂಥ ಸ್ಪೇಟ್ಸ ಟ್ ಅನ್ನು ನಮ್ಮ ಮಲೆನಾಡಿಗೆ ಕೊಡಬೇಕು. ಈ ಬಗ್ಗೆ ತಾವು ನಮಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು. ಇದರ ಬಗ್ಗೆ ಒಂದು ನಿರ್ಣಯ ಮಾಡಿ ಕಳುಹಿಸಬೇಕೆಂದು ನನ್ನ ವಿನಂತಿ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, This is exclusive jursilicative of the election, commission Election commission is the creation of the constitution. I don't think we are well within out purview to discuss that on the floor of the House. I would only seek your indulgence to look into the Constitutional provisions and then react.

ಅಧ್ಯಕ್ಷರು : ಮಾನ್ಯ ಸಿಂಧ್ಯಾರವರು ಹಾಗೂ ಮಾನ್ಯ ಜಗದೀಶ್ ಶೆಟ್ಟರ್ ರವರು ಏನು ಹೇಳಿದ್ದಾರೆ, ಮಾನ್ಯ ಕಾನೂನು ಸಚಿವರೇನು ಹೇಳಿದ್ದಾರೆ ಎಲ್ಲವನ್ನೂ ಆಲಿಸಿದ್ದೇನೆ. ನಾವೆಲ್ಲರೂ ಅಫಿಶಿಯಲ್ ಮೆಂಬರ್ಸ್ ಆಗಿರುವುದರಿಂದ ಸುಮಾರು ಎರಡು ತಿಂಗಳಿನಿಂದ ಈ ಗೊಂದಲ ಉಂಟಾಗಿದೆ. ಪ್ರತಿ ದಿನ ಪತ್ರಿಕೆಗಳಲ್ಲಾಗಲಿ, ಪಾಂಪ್ಲೆಂಟ್‌ನಲ್ಲಾಗಲ್ಲಿ ಎಲ್ಲಾ ಕಡೆ ಲಾಬಿ ನಡೆಯುತ್ತಿದೆ. ಮೊನ್ನೆ ಯಾವುದೋ ಪತ್ರಿಕೆಯಲ್ಲಿ ನಾನು ಆ ಸಭೆಗೆ ಅಧ್ಯಕ್ಷರ, ಅಧ್ಯಕ್ಷರು ಸಭೆಯನ್ನೇ ಕರೆದಿಲ್ಲವೆಂದು ಬರೆದುಬಿಟ್ಟಿದ್ದಾರೆ. ನಾನು ಅಧ್ಯಕ್ಷನು ಅಲ್ಲ, ನಾನು ಅವರ ಜೊತೆಯಲ್ಲಿ ಸಾಮಾನ್ಯ ಸದಸ್ಯನಾಗಿದ್ದೇನೇ ಅಷ್ಟೇ. ಅಧ್ಯಕ್ಷರಾಗಿ ಸಭೆಯನ್ನೇ ಕರೆದಿಲ್ಲವೆಂಬ ಕೆಟ್ಟ ಅಭಿಪ್ರಾಯ ಬರುವಂತೆ ಬರೆದಿದ್ದಾರೆ. ಅಂದರೆ ನಾನು ಸಭೆಯನ್ನು ಕರೆಯದೇ ಇರುವುದರಿಂದ ಈ ಪರಿಸ್ಥಿತಿ ಉಂಟಾಗಿದೆ ಎನ್ನುವ ರೀತಿಯಲ್ಲಿ ಪತ್ರಿಕೆಯಲ್ಲಿ ಬಂದಿದೆ. ದಯಮಾಡಿ ಪತ್ರಿಕೆಗಳವರಲ್ಲಿ ನನ್ನ ವಿನಂತಿ ಏನೆಂದರೆ, ಏನಾದರೂ ತಮಗೆ ವಿಷಯ ತಿಳಿದರೆ ಅದರ ಬಗ್ಗೆ ವಿಚಾರಣೆ ಮಾಡಿ ಅನಂತರ ಬರೆಯಿರಿ. ಎರಡನೆಯದಾಗಿ, ಸೆಂಟ್ರಲ್ ಡೀ ಲಿಮಿಟೇಷನ್ ಆಕ್ಟ್ 2002ರ ಪ್ರಕಾರ ಕ್ಷೇತ್ರಗಳ ವಿಂಗಡಣೆ ಮಾಡುತ್ತಿರುವವರು ನಮ್ಮ ಕಾನೂನು ಸಚಿವರಾದ ಮಾನ್ಯ ಚಂದ್ರೇಗೌಡರು ಹೇಳಿದಂತೆ, ಶ್ರೀ ಕುಲದೀಪ್ ಸಿಂಗ್ ರವರೇನಿದ್ದಾರೆ ಅದು ಅವರ ಜ್ಯೂರಿಸ್‌ಡಿಕ್ಷನ್ನೇ ಹೊರತು ನಮ್ಮದಲ್ಲ. ಅವರು ಹೇಳುವುದು ಸರಿ. ಆದರೂ ಐದು ಜನ ಲೋಕಸಭಾ ಸದಸ್ಯರು, ಐದು ಜನ ನಮ್ಮ ಶಾಸಕರು ಇರುವುದರಿಂದ ಶಾಸಕರ ಮನಸ್ಸಿನಲ್ಲಿ ಗೊಂದಲ ಉಂಟಾಗಿರುವುದರಿಂದ ನಾನು ಇಲ್ಲಿ ಅಧ್ಯಕ್ಷನಾಗಿ ಮತ್ತು ಅಸೋಸಿಯೇಟೆಡ್ ಮೆಂಬರ್ ಆಗಿರುವುದರಿಂದ ಅದನ್ನು ನಿವಾರಣೆ ಮಾಡುವುದು ನನ್ನ ಕರ್ತವ್ಯವಾಗಿದೆ. ಆದ್ದರಿಂದ ಈ ಗೊಂದಲದ ಬಗ್ಗೆ ಕ್ಲಾರಿಫೈ ಮಾಡುತ್ತಿದ್ದೇನೆಯೇ ಹೊರತು we are not discussing this subject. ಈಗಿರುವ ಪರಿಸ್ಥಿತಿಯಲ್ಲಿ ನನಗೆ ಗೊತ್ತಿರುವ ಪ್ರಕಾರ ಏನಿದೆಯೆಂದರೆ ಅಲ್ಲಿಂದ ನಮಗೇನೂ ವರ್ಕಿಂಗ್ ಪೇಪರ್ಸ್ ಬಂದಿಲ್ಲ. ಬುಕ್‌ಲೆಟ್ಸ್ ಬಂದಿಲ್ಲ. 224 ಕ್ಷೇತ್ರಗಳ ಬಗ್ಗೆ ಬುಕ್‌ಲೆಟ್ಸ್‌ನ್ನು ತಯಾರು ಮಾಡಿದ್ದೇವೆಂದು ಅವರು ಹೇಳಿಕೊಳ್ಳುತ್ತಿದ್ದಾರೆಯೇ ಹೊರತು ನಮಗೇನೂ ಅದರ ಬಗ್ಗೆ ವಿಷಯ ಗೊತ್ತಿಲ್ಲ. ಪತ್ರಿಕೆಗಳಲ್ಲಿ ಏನೇನು ಬಂದಿದೆಯೋ ಅವುಗಳೆಲ್ಲಾ ಊಹಾಪೋಹ. ದಯವಿಟ್ಟು ಆ ಊಹಾಪೋಹವನ್ನು ನಂಬಬೇಡಿ. ನನಗೆ ಗೊತ್ತಿರುವಂತೆ ಈ ತಿಂಗಳ ಕೊನೆ ಭಾಗದಲ್ಲಿ 224 ವಿಧಾನಸಭಾ ಕ್ಷೇತ್ರಗಳು ಮತ್ತು 28 ಲೋಕಸಭಾ ಕ್ಷೇತ್ರಗಳ ಬಗ್ಗೆ ಅವರು ಈಗ ಏನು ಮಾಡಿದ್ದಾರೋ" ಗೊತ್ತಿಲ್ಲ. ಅವರು ಮಾಡುವುದಕ್ಕೆ ಆಧಾರವೇನು ಎಂಬ ಪ್ರಶ್ನೆ ಬರುತ್ತದೆ, ಅದಕ್ಕೆ ಆಧಾರವೇನೆಂದರೆ ಅಂಕಿಅಂಶಗಳನ್ನು ಚೀಫ್ ಎಲೆಕ್ಟ್ರಲ್ ಆಫೀಸರ್‌ನಿಂದ 27 ಜಿಲ್ಲೆಗಳಿಂದ ಮಾಹಿತಿಯನ್ನು ದೆಹಲಿಗೆ ತರಿಸಿಕೊಂಡಿದ್ದಾರೆ. ಅದು ನನಗೆ ಗೊತ್ತು. ತರಿಸಿಕೊಂಡು ಅವರೇ ಮಾಡಿ ಅನಂತರ ನಮಗೆ ಕೊಡುತ್ತಾರೆ. ಅದನ್ನು ಈ ತಿಂಗಳ ಕೊನೆಯಲ್ಲಿ ಕೊಡುತ್ತಾರೆ ಎಂಬ ಅಂದಾಜು ಇದೆ. ನಂತರ ನಾವು ಎರಡು ಮೂರು ವಾರ ಸಮಯ ತೆಗೆದುಕೊಂಡು ನಾವು ರೀ ಆಡ್ಜೆಸ್ಟ್ ಮೆಂಟ್ ಮಾಡಿ ವಾಪಸ್ ಕೊಡಬೇಕು. ಲೋಕಸಭಾ ಸದಸ್ಯರು ಮತ್ತು ಶಾಸಕರೇನು ಹತ್ತು ಜನ ಸದಸ್ಯರಿದ್ದೇವಲ್ಲಾ ನಾವೆಲ್ಲಾ ಸೇರಿ ಪಾಪ್ಯುಲೇಷನ್, ಬೌಂಡರೀಸ್ ಹೇಗಿದೆ ಎಂದು ನೋಡಿ ರೀಅಡ್ಜೆಸ್ಟ್ ಮಾಡಿ ಹದಿನೈದು ದಿವಸದೊಳಗೆ ವಾಪಸ್ ಕೊಡುತ್ತೇವೆ. ಅವರು ಹದಿನೈದು ದಿವಸ ಸಮಯಕೊಡುತ್ತಾರೋ ಹತ್ತು ದಿವಸ ಸಮಯ ಕೊಡುತ್ತಾರೋ ಇನ್ನೂ ಗೊತ್ತಿಲ್ಲ. ಮುಕ್ಯಾಲು ಭಾಗ 2004ರಲ್ಲಿ ನಮ್ಮ

ಚುನಾವಣೆಗಳು ನಡೆಯುವುದರಿಂದ ಬಹುಶಃ ಒಂದು ತಿಂಗಳಾದರೂ ಸಮಯ ಕೇಳುತ್ತೇವೆ. ಸಮಯ ಕೇಳುವುದೊಂದೇ ಅಲ್ಲ, ಆಯಾಯ ಪಕ್ಷದ ಸದಸ್ಯರು ಯಾರಿದ್ದಾರೆ ಜಗದೀಶ್ ಶೆಟ್ಟರ್‌ರವರಿದ್ದಾರೆ, ಅವರನ್ನೆಲ್ಲಾರನ್ನು ಕೇಳುತ್ತಾರೆ, ಇದರಲ್ಲಿ ಖರ್ಗೆಯವರು, ಶಿವಕುಮಾರ್‌ರವರಿದ್ದಾರೆ; ಇಂಡಿಪೆಂಡೆಂಟ್ ಸದಸ್ಯರು ಬೇಕಾದರೆ ನನ್ನ ಹತ್ತಿರ ಬಂದು ತಮ್ಮ ಸಲಹೆಯನ್ನು ಹೇಳಬಹುದು. ಅದನ್ನೆಲ್ಲಾ ತೆಗೆದುಕೊಂಡೇ ನಾವು ರೀಅಡ್ಜೆಸ್ಟ್‌ಮೆಂಟ್ ಮಾಡಿ ಕೊಡುತ್ತೇವೆಯೇ ಹೊರತು ತಮ್ಮನ್ನು ಕೇಳದೆಯೇ ನಾವು ಮಾಡುವುದಿಲ್ಲ. ಆಕ್ಟ್‌ನಲ್ಲಿ ಅಸೋಸಿಯೇಟ್ ಮೆಂಬರ್, ಐದು ಜನ ಲೋಕಸಭಾ ಸದಸ್ಯರು, ಐದು ಜನ ಶಾಸಕರು ಏಕಿದ್ದಾರೆಂದರೆ ಅವರಿಗೆ ಹೆಲ್ಪ್ ಮಾಡುವುದಕ್ಕೋಸ್ಕರ, ಏಕೆಂದರೆ ದೆಹಲಿಯಲ್ಲಿ ಕುಳಿತುಕೊಂಡು ಬರೀ ಕಂಪ್ಯೂಟರ್ ಮುಂದೆ ಸ್ಪಾಟಿಸ್ ಸ್ಟಿಕ್ಸ್, ಬೌಂಡರೀಸ್ ನೋಡಿಕೊಂಡು ಮಾಡಿದರೆ ಆಗುವುದಿಲ್ಲ. ಲೋಕಲ್ ಸಿಚ್ಯುಯೇಷನ್ಸ್ ಏನಿದೆ, ಲೋಕಲ್ ಕಂಡೀಷನ್ಸ್ ಏನಿದೆ, ಎಲ್ಲಿ ಮಧ್ಯದಲ್ಲಿ ನದಿ ಬರುತ್ತದೆ" ಎಂಬುದನ್ನೆಲ್ಲ ನೋಡಬೇಕಾಗುತ್ತದೆ. ಕೆಲವು ಕ್ಷೇತ್ರಗಳು 170 ಕಿ.ಮೀ. ಇದೆಯಂತೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ದಯಮಾಡಿ ಕ್ಷಮಿಸಬೇಕು. ತಾವು ಇಲ್ಲಿ ಅಧ್ಯಕ್ಷರು.

ಅಧ್ಯಕ್ಷರು : ಗೊಂದಲ ಉಂಟಾಗಿದೆ, ಅವರಿಗೆ ಕ್ಲಾರಿಫೈ ಮಾಡೋಣವೆಂದು ಹೇಳುತ್ತಿದ್ದೇವೆಯೇ ಹೊರತು ಇದರ ಬಗ್ಗೆ ನಾವು ಚರ್ಚೆ ಮಾಡುತ್ತಿಲ್ಲ. We are not discussing.

Sri K.H. Ranganath : Whatever you say goes into the record.

(Interruptions)

ಶ್ರೀ ಜಗದೀಶ್‌ಶೆಟ್ಟರ್ : ಇವತ್ತು ಇದರ ಬಗ್ಗೆ ಸ್ಪಷ್ಟೀಕರಣ ಮಾಡುವ ಉದ್ದೇಶದಿಂದ ಪ್ರಸ್ತಾಪವಾಗಿದೆ.

ಅಧ್ಯಕ್ಷರು : ಯಾರೂ ಇದರ ಬಗ್ಗೆ ಊಹಾಪೋಹಗಳನ್ನು ನಂಬಬೇಡಿ ಎಂದು ಹೇಳುತ್ತಿದ್ದೇನೆಯೇ ಹೊರತು ಇನ್ನೇನನ್ನೂ ಹೇಳುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸಚಿವರಾದ ಶ್ರೀ ಕೆ.ಹೆಚ್. ರಂಗನಾಥ್‌ರವರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು : ಪತ್ರಿಕೆಗಳಲ್ಲಿ ಏನೇನೋ ಬರೆಯುತ್ತಿದ್ದಾರೆ. ಸಭೆಯನ್ನೇ ಕರೆದಿಲ್ಲವೆನ್ನುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮಗೆ ನೀವೇನು ಮಾಡುತ್ತಿದ್ದೀರಾ ಎಂದು ಸದಸ್ಯರು ಬಂದು ಕೇಳುತ್ತಿದ್ದಾರೆ. ಅದಕ್ಕೆ ನಾವೇನು ಉತ್ತರ ಕೊಡಬೇಕು? ಈ ಸಭೆಯಲ್ಲಿ ಕೇಳದೆ ಇನ್ನೆಲ್ಲಿ ಕೇಳಬೇಕು? ಆದ್ದರಿಂದ ನಾನು ಕೇಳಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ : X X X

ಅಧ್ಯಕ್ಷರು : ಏಕೆ, ನಮ್ಮ ಸದಸ್ಯರ್ಯಾರಿಗೂ ಸಹಾಯ ಮಾಡಬಾರದೇ? ಹೇಳಿ ದಯವಿಟ್ಟು? No. no., I am very sorry.

ಶ್ರೀ ಕೆ.ಹೆಚ್. ರಂಗನಾಥ್ : X X X

ಅಧ್ಯಕ್ಷರು : ಅದು ನಿಮ್ಮ ಅಭಿಪ್ರಾಯ.

ಶ್ರೀ ಕೆ.ಹೆಚ್. ರಂಗನಾಥ್ : X X X

---

* ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು : ಅದು ನಿಮ್ಮ ಸ್ವಂತ ಅಭಿಪ್ರಾಯ. ನಮಗೆ ಲೋಕಸಭಾ ಅಧ್ಯಕ್ಷರು ಹೇಳಿದ್ದಾರೆ. ಆಯಾಯ ವಿಧಾನಸಭೆಯ ಅಧ್ಯಕ್ಷರ ಹೆಸರನ್ನು ಹಾಕಿ ಕಳುಹಿಸಿ ಎಂದು ಹೇಳಿದ್ದಾರೆ. ಬೇಕಾದರೆ ತಾವು ಲೋಕಸಭಾ ಅಧ್ಯಕ್ಷರ ಹತ್ತಿರ ವಿಚಾರ ಮಾಡಿ. ಲೋಕಸಭಾ ಅಧ್ಯಕ್ಷರು ಹೇಳಿದ್ದರಿಂದ ನಮ್ಮ ಹೆಸರನ್ನು ಮೆನ್ ಷನ್ ಮಾಡಲಾಯಿತು, not otherwise. I am very sorry,

ಶ್ರೀ ಜಗದೀಶ್ ಶೆಟ್ಟರ್ : ಆ ಪಟ್ಟಿಯಲ್ಲಿ ಎಲ್ಲಾ ರಾಜ್ಯಗಳಲ್ಲಿ ವಿಧಾನಸಭೆಯ ಅಧ್ಯಕ್ಷರ ಹೆಸರನ್ನು ಹಾಕಿದ್ದಾರೆ.

ಅಧ್ಯಕ್ಷರು : ಲೋಕಸಭಾ ಅಧ್ಯಕ್ಷರ ನಿರ್ದೇಶನದ ಮೇರೆಗೆ ನಮ್ಮ ಹೆಸರುಗಳನ್ನು ಹಾಕಿರುವುದು. ಕೇಳಿನೋಡಿ. ಸುಮಾರು ಇಪ್ಪತ್ತು ಜನ ವಿಧಾನಸಭೆಯ ಅಧ್ಯಕ್ಷರ ಹೆಸರನ್ನು ಹಾಕಿದ್ದಾರೆ. ಲೋಕಸಭಾ ಅಧ್ಯಕ್ಷರೇ ನಮಗೆ ಹೇಳಿದ್ದಾರೆ. ಆಲ್ ಇಂಡಿಯಾ ಸ್ಪೀಕರ್ಸ್ ಕಾನ್‌ಫರೆನ್ಸ್ ಇಲ್ಲೇನು ನಡೆಯಿತಲ್ಲಾ ಅವತ್ತೇ ಡಿಸೈಡ್ ಆಗಿದೆ. ನೀವು ನಿಮ್ಮ ನಿಮ್ಮ ಸದಸ್ಯರಿಗೆ ಸಹಾಯ ಮಾಡಬೇಕಾಗುತ್ತದೆ, ನಿಮ್ಮ ಹೆಸರನ್ನು ಸೇರಿಸಿಕೊಳ್ಳಿ ಎಂದು ಲೋಕ ಸಭಾ ಅಧ್ಯಕ್ಷರೇ ಹೇಳಿದ್ದಾರೆ.

ಶ್ರೀ ಸಿ. ಭೈರೇಗೌಡ : ಆ ಸಮಿತಿಯಲ್ಲಿರುವ ಸದಸ್ಯರ ಹೆಸರುಗಳನ್ನು ನಾನು ನೋಡಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಹೇಳಿದ್ದನ್ನು ಕಡತದಿಂದ ತೆಗೆಸಿಬಿಡಿ. ಬಹಳ ಒಳ್ಳೆಯದು.

ಅಧ್ಯಕ್ಷರು : ಇದರ ಬಗ್ಗೆ ಇರುವ ಗೊಂದಲವನ್ನು ನಿವಾರಣೆ ಮಾಡಲು ಪ್ರಸ್ತಾಪ ಮಾಡಿದ್ದೇವೆಯೇ ಹೊರತು ನಾವು ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡುತ್ತಿಲ್ಲ.

Sri K.H. Ranganath : x x x

Mr. Speaker : I will consider it. ಅದನ್ನು ಕನ್ಸಿಡರ್ ಮಾಡುತ್ತೇನೆ. ಇದರಲ್ಲೇನೂ ವಿವಾದಾಸ್ಪದವಿಲ್ಲ. ಏನೂ ಇಲ್ಲ.

ಶ್ರೀ ಸಿ. ಬೈರೇಗೌಡ : ಇದರಲ್ಲಿ ತಕರಾರೇನಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಗೈಡ್‌ಲೈನ್ಸ್ ಇನ್ನೂ ಇಷ್ಯೂ ಆಗಿಲ್ಲ, ಯಾವ ಕ್ಷೇತ್ರದ ವಿಂಗಡನೆಯಾಗಿಲ್ಲ, ಯಾವುದೂ ಇಲ್ಲಿ ಇಲ್ಲ. ರೆಕಾರ್ಡ್‌ನಲ್ಲಿ ಇರುವಂಥದ್ದನ್ನು ತೆಗೆಯುವಂಥ ಪ್ರಶ್ನೆಯೇ ಇಲ್ಲ. ಇದರಲ್ಲಿ ಯಾವುದೂ ವಿವಾದಾತ್ಮಕವಾದುದೂ ಇಲ್ಲ. ಆದರೂ ಮಾನ್ಯ ಸಚಿವರೇಕೆ....

ಶ್ರೀ ಕೆ.ಹೆಚ್. ರಂಗನಾಥ್ : ನಡೆದಿರುವ ಸಂಪ್ರದಾಯದ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಸಿ. ಭೈರೇಗೌಡ : ತಾವು ಈ ಮಾನ್ಯ ಸಭೆಯ ಅಧ್ಯಕ್ಷರು. ನಮ್ಮ ಹಿತವನ್ನು ಕಾಪಾಡಬೇಕಾಗಿರತಕ್ಕದ್ದು ತಮ್ಮ ಜವಾಬ್ದಾರಿಯೆಂದು ನಾನು ಭಾವಿಸಿದ್ದೇನೆ. ಆ ದೃಷ್ಟಿಯಿಂದ ಆ ಸಮಿತಿಯಲ್ಲಿ ತಾವು ಸದಸ್ಯರಾಗಿದ್ದೀರಿ. ಆ ಪಟ್ಟಿಯನ್ನು ನೋಡಿದಾಗ, ಲೋಕಸಭೆಯಲ್ಲಿ ಯಾರ್ಯಾರು ಇದ್ದಾರೆ ಎಂಬುದನ್ನೂ ನಾವು ಗಮನಿಸಬೇಕಾಗುತ್ತದೆ. ಆ ಪಟ್ಟಿಯಲ್ಲಿ ಎಂತೆಂಥವರು ಇದ್ದಾರೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ಭಾರತದ ಮಾಜಿ ಪ್ರಧಾನಿಗಳಾಗಿರತಕ್ಕಂಥವರೂ ಕೂಡ ಆ ಪಟ್ಟಿಯಲ್ಲಿದ್ದಾರೆ. ನಮ್ಮ ಹಿತವನ್ನು ಕಾಪಾಡಲು ತಾವಿದ್ದೀರಿ.

---

* ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು : ಲೋಕಸಭಾ ಅಧ್ಯಕ್ಷರ ನಿರ್ದೇಶನದ ಮೇರೆಗೆ ನಮ್ಮನ್ನು ಆ ಸಮಿತಿಯಲ್ಲಿ ಹಾಕಿರುವುದು. ಇಡೀ ಭಾರತದಲ್ಲಿ 15 ಜನ ವಿಧಾನಸಭಾ ಅಧ್ಯಕ್ಷರುಗಳು ಅದರಲ್ಲಿದ್ದಾರೆ.

ಶ್ರೀ ಸಿ. ಬೈರೇಗೌಡ : ಇದು ರಾಷ್ಟ್ರಮಟ್ಟದಲ್ಲಿ ನಡೆದಿರುವ ವಿಚಾರ.

ಅಧ್ಯಕ್ಷರು : ಆದ್ದರಿಂದ ಇದು ಕಡತದಲ್ಲಿ ಇರಬೇಕೋ, ಬೇಡವೋ ಎಂಬುದನ್ನು ನೋಡುತ್ತೇನೆ. ವಿವಾದಾಸ್ಪದವಾದ ವಿಚಾರ ಯಾವುದು ಇದೆ ಮಾನ್ಯ ರಂಗನಾಥ್‌ರವರೇ?

(Interruptions)

Come on, tell me which is the controversial subject?

(ಗೊಂದಲ)

I am very sorry. ಅಲ್ಲಿ ಇರುವುದೇ, ತಪ್ಪು ಅಂದರೆ ಹೇಗೆ? ಲೋಕಸಭಾ ಅಧ್ಯಕ್ಷರು ಹೇಳಿರುವುದರಿಂದ ಹಾಕಿಸಿಕೊಂಡಿದ್ದೇವೆ. ತಾವು ಹೇಳಿದ್ದನ್ನು ಕನ್ಸಿಡರ್ ಮಾಡುತ್ತೇನೆ. ಏನಾದರೂ ಇಲ್ಲೀಗಲ್ ಆಗಿದ್ದರೆ ತೆಗೆಸುತ್ತೇನೆ ಬಿಡಿ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಹೇಳಿದ್ದನ್ನು ತೆಗೆಸಿಬಿಡಿ. ಬಾಕಿಯವರು ಹೇಳಿದ್ದು ಅವರವರಿಗೆ ಬಿಟ್ಟಿದ್ದು.

ಅಧ್ಯಕ್ಷರು : ಸ್ಪಷ್ಟೀಕರಣ ನೀಡಿ ಗೊಂದಲದ ನಿವಾರಣೆ ಮಾಡುತ್ತಿದ್ದೇವೆ, ಸದಸ್ಯರಿಗೆ ಸಹಾಯ ಮಾಡುತ್ತಿದ್ದೇವೆಯೇ ಹೊರತು ಇಲ್ಲೀಗಲ್ ಆಗಿರುವಂಥದ್ದೇನಿಲ್ಲ.

Sri K.H. Ranganath : Not in this House. ನಿಮ್ಮ ಚೆಂಬರ್‌ಗೆ ಬಂದು ಇದು ಹೀಗಿರಬೇಕು, ಅದು ಹಾಗಿರಬೇಕೆಂದು ಸಲಹೆಗಳನ್ನು ಕೊಡಬಹುದು.

ಅಧ್ಯಕ್ಷರು : ನಮ್ಮ ಚೆಂಬರ್ ಅಷ್ಟು ಜನರನ್ನು ಹಿಡಿಸುವುದಿಲ್ಲವಲ್ಲಾ.

Sri K.H. Ranganath : Not in this House.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ತಾವು ಗೊಂದಲವನ್ನು ನಿವಾರಣೆ ಮಾಡಿದ್ದು ತಪ್ಪೇನಿಲ್ಲ.

ಅಧ್ಯಕ್ಷರು : ಮಾನ್ಯ ಚೆನ್ನಿಗಪ್ಪನವರೆ, ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಹೇಳುತ್ತೇನೆ ಕುಳಿತುಕೊಳ್ಳಿ. ತಾವು ಯಾವುದೇ ಊಹಾಪೋಹಗಳನ್ನು ನಂಬಬೇಡಿ. ನಾನು ಯಾವುದಕ್ಕೂ ಅಧ್ಯಕ್ಷನಲ್ಲ, ಏಕೆಂದರೆ, ನಾನು ಅಧ್ಯಕ್ಷನಾಗಿದ್ದೇನೆ, ಸಭೆಯನ್ನು ಕರೆದಿಲ್ಲ ಎಂದು ಪತ್ರಿಕೆಯಲ್ಲಿ ಬಂದಿರುವುದರಿಂದ ಸ್ಪಷ್ಟೀಕರಣವನ್ನು ನೀಡಬೇಕಾಗಿರುವುದು ನನ್ನ ಕರ್ತವ್ಯ. ನಾನು ಯಾವುದಕ್ಕೂ ಅಧ್ಯಕ್ಷನೂ ಅಲ್ಲ, ಮೀಟಿಂಗ್‌ನ್ನು ಕರೆಯಬೇಕೆಂದು ಅಧಾರಿಟಿಯೂ ಇಲ್ಲ. ಏನೋ ಎಲ್ಲಾ ಸದಸ್ಯರು ಕೂಡಿಕೊಂಡು ನಮ್ಮ ಸದಸ್ಯರಿಗೆ ಸಹಾಯ ಮಾಡೋಣ ಎಂದು ಮಾತ್ರವೇ ಹೊರತು ಬೇರೇನೂ ಇಲ್ಲ. ಆದ್ದರಿದ ಪತ್ರಿಕೆಗಳಲ್ಲಿ ಬಂದಿರುವ ಊಹಾಪೋಹಗಳನ್ನು ನಂಬಬೇಡಿ, ಅಲ್ಲಿ ಬಂದಿರುವುದೆಲ್ಲಾ ತಪ್ಪಾಗಬಹುದು. ದಯವಿಟ್ಟು ನೀವ್ಯಾರೂ ಊಹಾಪೋಹಗಳನ್ನು ನಂಬಬೇಡಿ, ನಮಗೆ ಈ ತಿಂಗಳ ಕೊನೆಯಲ್ಲಿ ಅಲ್ಲಿಂದ ಬರುತ್ತದೆ, ಆಗ ತಮ್ಮಗಳೆಲ್ಲರ ಅಭಿಪ್ರಾಯವನ್ನು ಕೇಳಿ ಕಳುಹಿಸಿಕೊಡುತ್ತೇವೆ. ಇಷ್ಟಕ್ಕೆ ಈ ವಿಚಾರವನ್ನು ಇಲ್ಲಿಗೆ ನಿಲ್ಲಿಸೋಣ. ಮತ್ತೆ ಯಾರಿಗೂ ಈ ವಿಚಾರದ ಬಗ್ಗೆ ಮಾತನಾಡಲು ನಾನು ಅವಕಾಶ ಕೊಡುವುದಿಲ್ಲ. ಈಗ ಬೇರೆ ವಿಚಾರವನ್ನು ತೆಗೆದುಕೊಳ್ಳುತ್ತಿದ್ದೇನೆ. ಮಾನ್ಯ ಜಗದೀಶ್‌ಶೆಟ್ಟರ್‌ರವರೇ, ತಾವು ಮಾತನಾಡಿ.